# ಶ್ರೇಷ್ಠ ಕನಿಷ್ಠ

ಜೀವಿಗಳಲ್ಲಿ ಶ್ರೇಷ್ಠವಾದ ಪ್ರಾಣಿ ಮನುಷ್ಯ. ಮಾತನಾಡುವ ಶಕ್ತಿ ಅವನನ್ನು ಇತರ ಜೀವ ಪ್ರಭೇದಗಳಿಗಿಂತ ಭಿನ್ನವಾಗಿಸಿದೆ. ದೇಹದಲ್ಲೆಲ್ಲಾ ಶ್ರೇಷ್ಠವಾದ ಭಾಗ ಯಾವುದು ಎಂದಾಗ ತಲೆ ಎಂಬುದು ಸಹಜವಾಗಿ ಒದಗುವ ಉತ್ತರ. ಗಿರೀಶ್ ಕಾರ್ನಾಡರ 'ಹಯವದನ' ನಾಟಕದಲ್ಲಿ ಚರ್ಚೆಗೆ ಸಿಗುವ ಉತ್ತರವೇ 'ಶಿರದಂತೆ ಶರೀರ'. ಭಾರತೀಯ ಸಮಾಜದಲ್ಲಿನ ವರ್ಣವ್ಯವಸ್ಥೆ ನಿಂತಿರುವುದೇ ದೇಹದ ಭಾಗಗಳಲ್ಲಿನ ಶ್ರೇಷ್ಠ–ಕನಿಷ್ಠ ತರತಮವನ್ನಾದರಿಸಿ. ಇಲ್ಲಿ ಶಿರವೇ ಶ್ರೇಷ್ಠವಾಗಿದ್ದು ಅದನ್ನು ಬ್ರಾಹ್ಮಣ ಧರ್ಮವೆಂದೂ ನೆಲವನ್ನು ಊರಿನಿಲ್ಲುವ ಪಾದ ಕನಿಷ್ಠವೆಂದು ಅದನ್ನು ಶೂದ್ರ ಧರ್ಮವೆಂದು ಕರೆಯಲಾಯಿತು.

ಇಂತಹ ಶ್ರೇಷ್ಠ ಜೀವಿಯಾದ ಮಾನವನಲ್ಲೂ ಸಹ ಶ್ರೇಷ್ಠ–ಕನಿಷ್ಠವೆಂಬ ವರ್ಗೀಕರಣ ಮಾನವ ಸಮಾಜ ಒಪ್ಪಿಯೋ ಒಪ್ಪದೆಯೋ ಸಾಗಿ ಬಂತು. ಗೋಮುಖವ್ಯಾಘ್ರ ಎಂಬ ಮಾತನ್ನು ನಾವು ವಂಚನೆಗೆ ಸಂಬಂಧಪಟ್ಟ ಹಾಗೆ ಕೇಳುತ್ತಿರುತ್ತೇವೆ. ಅಂತರಂಗದಲ್ಲಿ ಕ್ರೂರಿಗಳಾಗಿದ್ದು ಮೇಲೆ ಮಾತ್ರ ಗೋವಿನ ಮುಖವಾಡ ಧರಿಸಿ ಸೌಮ್ಯವಾಗಿ ಕಾಣುವರು ಎಂಬ ಸಾಮಾನ್ಯ ಅರ್ಥದಲ್ಲಿ ಈ ಪದ ಬಳಕೆಯಾಗಿರುತ್ತದೆ. ಇಂತಹ ಹಲವು ಸ್ವಭಾವಗಳನ್ನು ಧರಿಸಬಲ್ಲ ಮಾನವ ಇದ್ದಕ್ಕಿದ್ದ ಹಾಗೆ ವ್ಯಾಘ್ರನಾಗಿಬಿಟ್ಟರೆ ಹೇಗೆ ವರ್ತಿಸಬಹುದು. ನೀಲತ್ತಹಳ್ಳಿ ಕಸ್ತೂರಿ ಚೀನಾದ ಒಂದು ಕತೆಯನ್ನು (ಲಿಫು–ಯೆನ್) 'ಹುಲಿ' ಎಂದು ಅನುವಾದಿಸಿದ್ದಾರೆ. ಮನುಷ್ಯನೊಳಗಿನ ವ್ಯಾಘ್ರನನ್ನು ಚಿತ್ರಿಸುವ ಕತೆಯಿದು.

ಚಾಂಗ್‌ಫೆಂಗ್ ಎಂಬ ಪ್ರಯಾಣಿಕ ತನ್ನ ಸೇವಕನೊಡನೆ ಪ್ರವಾಸ ಮಾಡುತ್ತಿದ್ದು ಒಂದು ಸಂಜೆ ವಿಶ್ರಮಿಸಲೆಂದು ಫೂಚೌ ಬಳಿಯ ಸಣ್ಣ ನಗರದಲ್ಲಿ ತಂಗುತ್ತಾನೆ. ಈ ಮುಸ್ಸಂಜೆಯ ಚೆಲುವು ನೋಡಲೆಂದು ಒಬ್ಬನೇ ಬೆತ್ತ ಹಿಡಿದು ಹೊರಗೆ ಬರುತ್ತಾನೆ. ಮಳೆ ಬಂದು ಒದ್ದೆಯಾದ ನೆಲ, ಎಲ್ಲೆಲ್ಲೂ ಕಣ್ಣುತುಂಬುವ ಹಸಿರು, ಬೀಸಿ ಬರುವ ತಂಗಾಳಿ, ಮೈಮರೆಸಿ ಬಹುದೂರ ಗುಡ್ಡದ ತಪ್ಪಲಿನ ಕಡೆಗೆ ಅವನನ್ನು ಕೊಂಡೊಯ್ಯುತ್ತದೆ. ಗುಡ್ಡದಿಂದ ಕೆಳಗೆ ವಿಸ್ತಾರವಾದ ಹಸಿರು ಹುಲ್ಲಿನ ಬಯಲು, ಅಲ್ಲಿ ತನ್ನ ಅಂಗಿಯನ್ನು ಕಳಚಿ ಮರಕ್ಕೆ ನೇತುಹಾಕಿ, ಬೆತ್ತವನ್ನು ಕೆಳಗಿಟ್ಟು ಮಲಗಿ ಬಾನನ್ನು ನೋಡುತ್ತಾನೆ. ಆ ಕ್ಷಣ ಅವನಿಗೆ ನೆನಪಾಗಿದ್ದು ಇಂತಹ ಶಾಂತ ಸೌಂದರ್ಯ ಮರೆತ ಮನುಷ್ಯನ ಕೀರ್ತಿಗಾಗಿ, ಹೆಸರಿಗಾಗಿ, ಸ್ವಾರ್ಥಕ್ಕಾಗಿ ನಡೆಸುವ ನಿರಂತರ ಹೊಡೆದಾಟ ಮತ್ತು ಬಡಿದಾಟ, ತಣ್ಣನೆ ಗಾಳಿ ಅವನನ್ನು ನಿದ್ರಿಸುವಂತೆ ಮಾಡುತ್ತದೆ.

ಎಚ್ಚರವಾದಾಗ ರಾತ್ರಿಯಾಗಿತ್ತು. ಕಾಡುವ ಹಸಿವು ಬೇರೆ. ಹೊಟ್ಟೆಯ ಮೇಲೆ ಕೈಯಾಡಿಸುತ್ತಾನೆ. ಮೆತ್ತನೆಯ ಉಣ್ಣೆ ತಗುಲಿತು. ಎದ್ದು ಕೂತು ನೋಡಿದರೆ ಮೈಮೇಲೆಲ್ಲಾ ಕಪ್ಪು ಪಟ್ಟೆಗಳು. ಕೈ ಬೀಸಿದರೆ ಕೈತುಂಬಾ ತುಳುಕುವ ಶಕ್ತಿ. ಆಕಳಿಸಿದರೆ ಗರ್ಜನೆಯ ಸದ್ದು. ಓ! ತಾನು ಹುಲಿಯಾಗಿ ಬಿಟ್ಟಿದ್ದೇನೆ! ಇನ್ನು ಮುಂದೆ ಮನುಷ್ಯನಲ್ಲ. ಈಗ ಹೊಸ ಜನ್ಮ ಆರಂಭಿಸಬೇಕು. ಬಂಡೆಯಿಂದ ಬಂಡೆಗೆ ಜಿಗಿದು ಓಡುತ್ತಾ ಸಮೀಪದಲ್ಲಿದ್ದ ಆಶ್ರಮದ ಬಾಗಿಲನ್ನು ಕಾಲಿನಿಂದ ಕೆರೆದು ತೆಗೆಯಿರಿ ಎಂದ. ಹುಲಿಯ ಗರ್ಜನೆ ಕೇಳಿ ಅವರು ಬಾಗಿಲು ತೆರೆಯಲಿಲ್ಲ. ಆ ಬೌದ್ಧ ಸನ್ಯಾಸಿಗಳೊಂದಿಗೆ ಊಟ ಮಾಡಿ ಚರ್ಚಿಸಬೇಕೆಂದಿದ್ದೆ. ಇನ್ನು ಮುಂದೆ ಇದೆಲ್ಲಾ ಸಾಧ್ಯವಾಗುವುದಿಲ್ಲ ಎಂದುಕೊಂಡು ಹಳ್ಳಿಯ ದಾರಿಯಲ್ಲಿ ನಡೆದ. ಚೆಂದದ ಹುಡುಗಿಯೊಬ್ಬಳು ನಡೆದು ಹೋಗುತ್ತಿದ್ದಳು. ಅವಳನ್ನು ಮುಟ್ಟಲೆಂದು ಸಮೀಪ ಹೋದ. ಅವಳು ಕಿರುಚಿಕೊಂಡು ಪರಾರಿಯಾದಳು. ಹೊಟ್ಟೆಯಲ್ಲಿನ ಹಸಿವು ವ್ಯಾಘ್ರನ ಬಯಕೆ ಕೆರಳಿಸಿತು. ಕೊಬ್ಬಿದ ಕುರಿ ಅಥವಾ ಒಂದು ಹಂದಿ ಸಿಕ್ಕರೆ ಹೇಗೆ ಎನ್ನಿಸಿತು. ಈ ಯೋಚನೆ ನಾಚಿಕೆ ಹುಟ್ಟಿಸಿತು. ಅಷ್ಟರಲ್ಲಿ ಬೆಳಗಾಗಿ ಹಸಿವಿನಿಂದ ಗುಡ್ಡಕ್ಕೆ ಹಿಂತಿರುಗಿದ.

ಬೆಳಕು ಹರಿಯುವ ಹೊತ್ತಿಗೆ ಜನರ ಓಡಾಟ ಆರಂಭವಾಗುತ್ತದೆ. ಇದ್ದಕ್ಕಿದ್ದಂತೆ ಪ್ರಾಣಿಗಳನ್ನೇ ಏಕೆ ತಿನ್ನಬೇಕು. ಮನುಷ್ಯನನ್ನು ಯಾಕೆ ತಿನ್ನಬಾರದು ಎಂಬ ವಾಂಛೆ ಆರಂಭವಾಗುತ್ತದೆ. ಈ ವ್ಯಾಘ್ರರೂಪಿ ಚೆಂಗ್‌ಚಿಯೂ ಎಂಬುವನ ಮೇಲೆ ದಾಳಿ ಮಾಡಿ ಗುಡ್ಡದ ಮೇಲೆ ಎಳೆದುಕೊಂಡು ಹೋಗುವುದಲ್ಲದೆ ಸಾವಧಾನವಾಗಿ ಅವನನ್ನು ತಿಂದು ಮುಗಿಸುತ್ತಾನೆ. ಈಗ ಅವನಿಗೆ ಆಹಾರಕ್ಕಾಗಿ ಪರದಾಡುವ ಬದುಕು ಸುಖಕರವಾದದ್ದಲ್ಲ. ಮರಳಿ ಮಾನವನಾಗಬೇಕು ಎನಿಸುತ್ತದೆ. ಮರಳಿ ತಾನು ಮಲಗಿದ ಜಾಗಕ್ಕೆ ಹೋದರೆ ಮಾನವನಾಗಬಹುದು ಎನಿಸಿ ಹಿಂತಿರುಗಿ ಅಲ್ಲಿಗೇ ಹೋಗುತ್ತಾನೆ. ತಾನು ಬಿಚ್ಚಿಟ್ಟ ಅಂಗಿ, ಇಟ್ಟ ಬೆತ್ತ ಹಾಗೇ ಇತ್ತು. ಆ ಹುಲ್ಲುಹಾಸಿನ ಮೇಲೆ ಮಲಗಿ ಹೊರಳಾಡಿದ ನಂತರ ನೋಡಿಕೊಂಡಾಗ ಮರಳಿ ಮೂಲರೂಪ ಪಡೆದಿದ್ದ. ವಿಚಿತ್ರ ಅನುಭವದೊಂದಿಗೆ ಮರಳಿ ತಾನು ತಂಗಿದ ಊರಿನೆಡೆಗೆ ಬಂದು ತಲುಪಿದ. ಕೇಳಿದವರಿಗೆ ಬೌದ್ಧ ಆಶ್ರಮದಲ್ಲಿ ಭೋದನೆ ಕೇಳುತ್ತಾ ಕುಳಿತಿದ್ದೆ ಎಂಬ ಸುಳ್ಳು ಹೇಳಿದ.

ಕೆಲವು ವರ್ಷಗಳ ನಂತರ ಗೆಳೆಯರ ಊರಿಗೆ ಹೋಗುತ್ತಾನೆ. ಗೆಳೆಯರು ಅವನಿಗಾಗಿ ಔತಣ ಏರ್ಪಡಿಸುತ್ತಾರೆ. ಆ ಔತಣದಲ್ಲಿ ಪ್ರತಿಯೊಬ್ಬರೂ ತಮ್ಮ ಅನುಭವದ ಕತೆ ಹೇಳಿಕೊಂಡಾಗ ಹಿಂದೆ ತಾನು ಹುಲಿಯಾಗಿ ಮಾನವನನ್ನು ಕೊಂದು ತಿಂದ ಕತೆ ಹೇಳುತ್ತಾನೆ. ಆ ಕಥೆಯನ್ನು ಹೇಳುವಾಗ ಅವನು ತಿಂದ ಚೆಂಗ್‌ಚಿಯೂ ಮಗ ಅಲ್ಲಿದ್ದು ಅದನ್ನು ಕೇಳಿ ಸಿಟ್ಟಿಗೆದ್ದು ಅವನ ಮೇಲೆ ಹಲ್ಲೆ ಮಾಡಿ ಕೊಲ್ಲಲೆತ್ನಿಸುತ್ತಾನೆ. ಎಲ್ಲ ಗೆಳೆಯರು ಇಬ್ಬರನ್ನೂ ಸಮಾಧಾನಿಸಲು ಯತ್ನಿಸುತ್ತಾರೆ. ತಂದೆಯ ಆತ್ಮತೃಪ್ತಿಗಾಗಿ ಚಾಂಗ್‌ಪೆಂಗ್‌ನನ್ನು ಕೊಲ್ಲಲೇ ಬೇಕೆನ್ನುವ ಮಗ, ನಾನು ಅವನ ತಂದೆಯನ್ನು ಕೊಂದಾಗ ಮಾನವನಾಗಿರಲಿಲ್ಲ, ಹುಲಿಯಾಗಿದ್ದೆ ಎನ್ನುವ ಚಾಂಗ್‌ಫೆಂಗ್ ಜಗಳ ತಾರಕಕ್ಕೇರುತ್ತದೆ. ನೆರೆದ ಜನ ಕ್ಷಮೆ ಬೇಡಿದ ಚಾಂಗ್‌ಫೆಂಗನನ್ನು, ಸೇಡು ತೀರಿಸಿಕೊಳ್ಳಲೇಬೇಕೆಂಬ ರೋಷದಲ್ಲಿದ್ದ ಚೆಂಗ್‌ಚಿಯೂ ಮಗನನ್ನು ದೂರ ದೂರ ದೇಶಗಳ ಕಡೆಗೆ ಗಡೀಪಾರು ಮಾಡಿ ನಿಟ್ಟುಸಿರು ಬಿಡುತ್ತಾರೆ.

ಈ ಕತೆ ಕೇವಲ ಶಿರದಂತೆ ಶರೀರ ಎನ್ನುವ ನೀತಿ ಹೇಳಿದರೂ ತೊಗಲಿನಂತೆ ಶರೀರವಾಗುವುದಿಲ್ಲ ಎಂಬ ಹೊಸಕಾಲದ ನೀತಿಯನ್ನು ಹೇಳುತ್ತದೆ. ದೇಶ, ರಾಜ್ಯಗಳನ್ನು ಸುಟ್ಟುಬೂದಿ ಮಾಡಿದ ಕೋಮುವಾದಿಗಳ, 'ನಾವು ಸುಂದರ ರಾಜ್ಯವನ್ನು ಕಟ್ಟಿ ಆಳಲು ಹೊರಟಿದ್ದೇವೆ ಎಂಬ ಮಾತು ನಂಬಲನರ್ಹವಾಗಿಯೇ ತೋರುತ್ತದೆ'. ಇದು ಹೇಗೆಂದರೆ 'ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯಿತ್ತು ಕಾಣಾ ರಾಮನಾಥ' ಎನ್ನುವ ತೊಗಲ ಹೊದೆಯುವ ಆಟವಷ್ಟೇ ಆಗಿರುತ್ತದೆ. ಅಂತರಂಗದಲ್ಲಿ ವಾಘ್ರನನ್ನು ಹುಡುಕುವುದು ಹೇಗೆ, ಕೊಲ್ಲುವುದು ಹೇಗೆ?

**■ ಅಮೃತಮತಿ**

## ಮಾತೇ ಮುತ್ತು

- ಅರ್ಹರ ಮುಂದೆ ಕೊಂಕಿಲ್ಲದ ತಪ್ಪೊಪ್ಪಿಗೆ, ಮತ್ತೆ ಮಾಡನೆಂಬ ಭರವಸೆ– ಇದೇ ಪರಿಶುದ್ಧವಾದ ಪಶ್ಚಾತ್ತಾಪ.
  —ಮಹಾತ್ಮ ಗಾಂಧೀಜಿ
- ದೇಶ ಎಂತಹ ಮನುಷ್ಯರನ್ನು ರೂಪಿಸುತ್ತಿದೆ ಎಂಬುದೇ ನಾಗರಿಕತೆಯ ನಿಜವಾದ ಒರೆಗಲ್ಲು, ಜನಸಂಖ್ಯೆಯಲ್ಲ, ವಿಸ್ತಾರವಲ್ಲ.
  —ಎಮರ್ಸನ್
- ತನ್ನ ವಿಷದಿಂದ ಎಚ್ಚರ ತಪ್ಪಿದ ಹಾವು ತನ್ನನ್ನೇ ಕಚ್ಚಿಕೊಳ್ಳುತ್ತದೆ.
  —ಪಂಚತಂತ್ರ
- ಒಳ್ಳೆಯ ನಡವಳಿಕೆ ಇಲ್ಲದವನು, ಬಟ್ಟೆ ಉಟ್ಟಿದ್ದರೂ ನಗ್ನನೇ.
  ––ಆಚಾರ್ಯ ಸೋಮದೇವ
- ಯಾವುದರಲ್ಲಾದರೂ ನಂಬಿಕೆ ಇಟ್ಟು ಉತ್ಸಾಹದಿಂದ ಮಾಡುವುದಾದರೆ ಜಯ ಖಂಡಿತ.
  —ಜಾರ್ಜ್‌ಷಿನ್
- ಯುದ್ಧವನ್ನು ಕೊನೆಗೊಳಿಸಲು ನಮ್ಮಿಂದ ಆಗಿದ್ದರೆ, ಯುದ್ಧ ನಮ್ಮನ್ನೇ ಕೊನೆಗೊಳಿಸುತ್ತದೆ.
  —ಎಚ್.ಜಿ. ವೇಲ್